

ಆರಂಭದ ಹೆಜ್ಜೆಗಳನ್ನು ಮೇಘಾ ನೆನಪಿಸಿಕೊಳ್ಳುತ್ತಾರೆ.

ಆಗ ಮೇಘಾ ಕಂಪನಿಯೊಂದರಲ್ಲಿ ಗ್ರಾಫಿಕ್ ಡಿಸೈನರ್ ಆಗಿಯೂ ಕೆಲಸ ಮಾಡುತ್ತಿದ್ದರು. ಬದುಕು ಮರೆಯಲಾಗದ ಆಘಾತವನ್ನು ಕೊಟ್ಟಿದ್ದೂ ಆಗಲೇ. ಅವರ ತಮ್ಮ ಆತ್ಮಹತ್ಯೆ ಮಾಡಿಕೊಂಡಿದ್ದು ಇಡೀ ಕುಟುಂಬಕ್ಕೆ ಚೇತರಿಸಿಕೊಳ್ಳಲಾಗದ ಆಘಾತವನ್ನು ಕೊಟ್ಟಿತ್ತು. ಮೇಘಾ ಕೆಲಸಕ್ಕೆ ರಾಜೀನಾಮೆ ಕೊಟ್ಟು ಮನೆಗೆ ಹೋಗಿ ಕೂತರು. ಎರಡು ತಿಂಗಳು ಮನೆಯಲ್ಲಿಯೇ ಇದ್ದ ಅವರು, ತಮ್ಮನ ಸಾವಿನ ನೋವಿನಿಂದ ಹೊರಗೆ ಬರಲು ಏನಾದರೂ ಕೆಲಸಕ್ಕೆತೊಡಗಿಕೊಳ್ಳಲು ನಿರ್ಧರಿಸಿದರು. ಯುವ ನಿರ್ದೇಶಕ ಜಯಶಂಕರ್ ಅವರ 'ಶಿವಮ್ಮ' ಸಿನಿಮಾಗೆ ಸಹಾಯಕ ನಿರ್ದೇಶಕಿಯಾಗಿ ಕೆಲಸ ಮಾಡಿದರು. ನಂತರ 'ಏಕಂ' ಎಂಬ ವೆಬ್ ಸೀರೀಸ್‌ಗೂ ಸಹಾಯಕ ನಿರ್ದೇಶಕಿಯಾಗಿ ಕೆಲಸ ಮಾಡಿದರು.

'ಸಿನಿಮಾಗಳಿಗೆ ಸಹಾಯಕ ನಿರ್ದೇಶಕಿಯಾಗಿ ಕೆಲಸ ಮಾಡಿದೆ. ಆದರೆ ನನಗೆ ತುಂಬ ಸಾಲ ಇದೆ. ಹಣ ಸಾಲ್ತಿರಲಿಲ್ಲ. ಹಾಗಾಗಿ ಮತ್ತೆ ಕಂಪನಿಯೊಂದರಲ್ಲಿ ಗ್ರಾಫಿಕ್ ಡಿಸೈನರ್ ಆಗಿ ಸೇರಿಕೊಂಡೆ' ಎನ್ನುವ ಮೇಘಾ, 'ಎನ್ನೋ' ಸಿನಿಮಾ ಮಾಡಿದ್ದೂ ಕೆಲಸಕ್ಕೆ ಸೇರಿಕೊಂಡ ಮೇಲೆಯೇ.

'ತಮ್ಮನ ಸಾವು ನನ್ನನ್ನು ತೀವ್ರವಾಗಿ ಕಾಡುತ್ತಿತ್ತು. ಹಾಗೆ ಸುಮ್ಮನೆ ಏನೋ ಕಥೆಯ ರೀತಿ ಬರೆದೆ. ಅದನ್ನು ಎರಡು ಮೂರು ಸಲ ಓದಿದ ಮೇಲೆ ಸಿನಿಮಾ ಮಾಡಬಹುದು ಅನಿಸಿತು. ಸ್ನೇಹಿತರೆಲ್ಲ ಜೊತೆಯಾದರು. ಮೊದಲಿಗೆ ಜೈಶಂಕರ್ ಬಳಿ ಚರ್ಚಿಸಿದೆ. ಅವರಿಗೆ ಸಲಕರಣೆಗಳೆಲ್ಲ ಎಲ್ಲಿ ಸಿಗುತ್ತವೆ ಗೊತ್ತಿತ್ತು. ಶಶಾಂಕ್ ಬಳಿ ಕ್ಯಾಮೆರಾ ಇತ್ತು. ಮತ್ತೊಬ್ಬ ಸ್ನೇಹಿತರ ಬಳಿ ಲೆನ್ಸ್ ತಗೊಂಡೆ. ಊರಲ್ಲಿ ತಮ್ಮನ ಸ್ನೇಹಿತರ ಜೊತೆ ಸೇರಿಕೊಂಡು ಲೊಕೇಶನ್ ಆಯ್ಕೆ ಮಾಡಿಕೊಂಡೆ. ಮುಖ್ಯಪಾತ್ರದಲ್ಲಿ ಬೇರೊಬ್ಬರು ನಟಿಸಬೇಕಿತ್ತು. ಅವರು ಬರಲಿಲ್ಲ. ಊರ ಕಡೆಯ ಮತ್ತೊಬ್ಬರನ್ನು ಆಯ್ಕೆ ಮಾಡಿಕೊಂಡಿದ್ದೆವು. ಚಿತ್ರೀಕರಣದ ಹಿಂದಿನ ದಿನ ಸಂಜೆ ಬರಲ್ಲ ಎಂದು ಕೈಕೊಟ್ಟರು. ಕೊನೆಗೆ ನಾನೇ ನಟಿಸಿದೆ' ಎಂದು 'ಎನ್ನೋ' ಕಿರುಚಿತ್ರ ರೂಪುಗೊಂಡ ಬಗೆಯನ್ನು ವಿವರಿಸುವ ಮೇಘಾಗೆ ಈ ಚಿತ್ರಕ್ಕೆ ಸಿಕ್ಕಿರುವ ಸ್ಪಂದನದಿಂದ ಹೊಸ ದಿಗಂತವೊಂದು ಕಂಡಂತಾಗಿದೆ.

'ಸ್ವಲ್ಪ ಜನ ನೋಡಬಹುದು ಎಂದುಕೊಂಡಿದ್ದೆ. ಟೊಟೊ ಪ್ರಶಸ್ತಿ ಸಮಯದಲ್ಲಿ ತುಂಬ ಜನ ನೋಡಿದರು. ಇದುವರೆಗೆ ಹತ್ತಾರು ಸಾವಿರ ಜನ ಈ ಕಿರುಚಿತ್ರ ನೋಡಿದ್ದಾರೆ' ಎನ್ನುವ ಅವರಿಗೆ ಮುಂದೆಯೂ ಸಿನಿಮಾವನ್ನು ತಮ್ಮ ಅಭಿವ್ಯಕ್ತಿ ಮಾಧ್ಯಮವನ್ನಾಗಿ ಮಾಡಿಕೊಳ್ಳುವ ಮಹತ್ವಾಕಾಂಕ್ಷೆ ಇದೆ. 'ನಾನು ಇದುವರೆಗೆ ಚೌಕಟ್ಟಿನೊಳಗೆ ಕಲಿತಿದ್ದೆಲ್ಲವನ್ನೂ ಈ ಮಾಧ್ಯಮದೊಳಗೆ ಬಳಸಿಕೊಳ್ಳಬಹುದು. ಹಾಗಾಗಿ ಇದೊಂದು ಪರಿಪೂರ್ಣ ಮಾಧ್ಯಮ ಅನಿಸಿದೆ. ಆದರೆ ಅದು ಪೂರ್ಣಗೊಳ್ಳಲು ಇರುವ ಒಂದೇ ಒಂದು ತೊಡಕೆಂದರೆ ಹಣ' ಎಂದು ನಗುವ ಮೇಘಾ ಹೊಸ ಕಥೆಯೊಂದನ್ನು ಬರೆಯುತ್ತಿದ್ದಾರೆ. ■

# ಅಶರೀರವಾಣಿಗೆ ಶಾರೀರ ಕೊಟ್ಟ ಸತೀಶ್

ನಟ, ನಿರ್ಮಾಪಕನಾಗಿ ಗುರ್ತಿಸಿಕೊಂಡಿದ್ದ ನೀನಾಸಂ ಸತೀಶ್ ಈಗ ಗೀತರಚನೆಕಾರ ಮತ್ತು ಗಾಯಕನಾಗಿಯೂ ಗಮನಸೆಳೆಯುತ್ತಿದ್ದಾರೆ. ಕಳೆದ ಎರಡು ವರ್ಷಗಳಿಂದ ಇಡೀ ಜಗತ್ತನ್ನೇ ಹಿಂಡಿ ಹಿಪ್ಪೆ ಮಾಡಿದ ಕೊರೊನಾ ಮತ್ತು ಅದು ತಂದಿತ್ತ ಸಂಕಟವೇ ಸತೀಶ್ ಅವರಲ್ಲಿ ಹಾಡಾಗಿ ಅಭಿವ್ಯಕ್ತಿಗೊಂಡಿದೆ. 'ಈ ಅಶರೀರವಾಣಿ ಎಲ್ಲಿಂದ ಹೇಗೆ ಬಂತು?' ಎಂದು ಆರಂಭವಾಗುವ ಈ ಹಾಡು ಕೊರೊನಾ ಕಾಲದ ಸಂಕಟಗಳಲ್ಲಿ ಮುಳುಗೆದ್ದಂತಿದೆ.

ಈ ವಿಡಿಯೊ ಆಲ್ಬಂನಲ್ಲಿ ಸತೀಶ್ ಅವರಷ್ಟೇ ಗಮನಸೆಳೆಯುವ ಇನ್ನೊಂದು ಮುದ್ದು ಮುಖ ಪುಟಾಣಿ ಮನಸ್ವಿತಾ ಅವರದ್ದು. ಬದುಕಿನ ಮುಗ್ಧತೆ ಮತ್ತು ಸಾವಿನ ಕ್ರೌರ್ಯ ಎರಡನ್ನೂ ಮುಖಾಮುಖಿಯಾಗಿಸುವ ಈ ಹಾಡನ್ನು ಸತೀಶ್ ಅವರೇ ಬರೆದು ಸಂಗೀತ ಸಂಯೋಜಿಸಿ ಹಾಡಿದ್ದಾರೆ. ರಘುನಂದನ್ ಕಾನಡ್ಕ ಕ್ರಿಯೇಟಿವ್ ಡೈರೆಕ್ಟರ್ ಆಗಿ ಕೆಲಸ ಮಾಡಿದ್ದಾರೆ. ಸಂದೀಪ್ ಕುಮಾರ್ ಛಾಯಾಗ್ರಹಣ, ಸುರೇಶ್ ಸಂಕಲನ ಈ ಆಲ್ಬಂಗಿದೆ.

ಹಾಡಿನ ಕೊಂಡಿ: **https://bit.ly/3C6eR3M**

■

